■ ಹನಿ



## ಇಂಗ್ಲೆಂಡಿನಲ್ಲಿ ತಿಣುಕಾಟ

ವಿರಾಟ್ ಕೊಹ್ಲಿಗೆ ಏನಾಗಿದೆ? ರನ್ ಗಳಿಸಲು ಏಕೆ ಇಷ್ಟೊಂದು ತಿಣುಕಾಡುತ್ತಿದ್ದಾರೆ? ಕಳೆದ 3 ವರ್ಷಗಳಲ್ಲಿ ಮೈದಾನಕ್ಕಿಳಿದರೆ ಮಿಂಚಿನಂತೆ ಅಬ್ಬರಿಸುತ್ತಿದ್ದ ಕೊಹ್ಲಿ ಇವರೇನಾ?– ಅಭಿಮಾನಿಗಳ ಪ್ರಶ್ನೆಗಳಿಗೆ ಕೊನೆ ಮೊದಲಿಲ್ಲ.

‘ಕೊಹ್ಲಿಗೆ ಆಟಕ್ಕಿಂತ ಬೇರೆ ಕಡೆಗೆ ಗಮನ ಹೆಚ್ಚಾಗಿದೆ. ಕೊಹ್ಲಿ ಪ್ರವಾಸ ಹೋದಲ್ಲೆಲ್ಲ ಆತನ ಗೆಳತಿ ಬಾಲಿವುಡ್ ತಾರೆ ಅನುಷ್ಕಾ ಶರ್ಮಾ ಕೂಡಾ ಕೆಲಸದ ನೆಪ ಹೇಳಿ ಹೋಗುತ್ತಾಳೆ. ಕೊಹ್ಲಿ ಬೌಲ್ಡ್ ಆಗೋದು ಹೆಚ್ಚಾಗಿದೆ. ಕವರ್ ಸುತ್ತಲೇ ಕ್ಯಾಚ್ ಕೊಡುತ್ತಾರೆ. ಆಟದ ಶೈಲಿ ಬದಲಾಗಬೇಕು’ ಎಂದೆಲ್ಲ ಟೀಕೆ ಟಿಪ್ಪಣಿಗಳೂ ಹರಿದುಬರುತ್ತಿವೆ. ಇಂಗ್ಲೆಂಡಿಗೆ ಪ್ರವಾಸ ಹೋಗಿರುವ ಭಾರತ ತಂಡದಲ್ಲೀಗ ಅತ್ಯಂತ ಹೆಚ್ಚು ನಿರಾಶೆ ಹುಟ್ಟಿಸಿರುವ ಬ್ಯಾಟ್ಸ್‌ಮನ್ ಕೊಹ್ಲಿ. ಮೂರು ಟೆಸ್ಟ್‌ಗಳ ಆರು ಇನಿಂಗ್ಸ್‌ಗಳಲ್ಲಿ ಗಳಿಸಿದ ಒಟ್ಟು ಮೊತ್ತ 101. ಅತ್ಯಧಿಕ ಅಂದರೆ 39 ರನ್ನು! 28 ವರ್ಷಗಳ ಬಳಿಕ ಲಾರ್ಡ್ಸ್ ಟೆಸ್ಟಲ್ಲಿ ಭಾರತ ಐತಿಹಾಸಿಕ ಜಯ ಗಳಿಸಿದರೂ ಅದರಲ್ಲಿ ಕೊಹ್ಲಿ ನೆರವು ಸೊನ್ನೆಯೇ.

ಕೊಹ್ಲಿ ಓಪನ್‌ಎಂಡ್ ಬ್ಯಾಟ್ಸ್‌ಮನ್. ಅಂದರೆ ಬ್ಯಾಟನ್ನು ಶಾಸ್ತ್ರೀಯವಾಗಿ ನೆಲಕ್ಕೆ ಊರಿ ಎದುರಿಸುವವರಲ್ಲ. ಹೊಡೆತಕ್ಕೆ ಸಿದ್ಧವಾಗಿಯೇ ನಿಲ್ಲುವ ಶೈಲಿ ಆತನದು. ಇಂಗ್ಲೆಂಡಿನ ಬೌಲರ್‌ಗಳ ಸ್ವಿಂಗ್ ಅನ್ನು ಎದುರಿಸುವಲ್ಲಿ ಮೋಸ ಹೋಗಿ ಕವರ್‌ನಲ್ಲೇ ಕ್ಯಾಚ್ ನೀಡುತ್ತಿದ್ದಾರೆ. ಹಿಂದೆ ಜಾವೇದ್ ಮಿಯಾಂದಾದ್, ಮೊಹಿಂದರ್ ಅಮರನಾಥ್ ಅವರೂ ಹೀಗೆಯೇ ಆಡುತ್ತಿದ್ದವರು. ಆದರೆ ಅವರು ವೇಗಿಗಳ ಸ್ವಿಂಗ್‌ಗೆ ಹೆದರುತ್ತಿರಲಿಲ್ಲ. ಕೊಹ್ಲಿಯೂ ಹಾಗೆಯೇ ಆಡಬೇಕು ಎನ್ನುವುದು ತಜ್ಞರ ಅಭಿಪ್ರಾಯ. ‘2–3 ವರ್ಷ ಏರುಗತಿಯಲ್ಲಿ ಅತ್ಯಧಿಕ ರನ್ ಹೊಡೆದ ಬಳಿಕ ಈ ರೀತಿ ಕೆಲವೊಮ್ಮೆ ರನ್ ಇಳಿಕೆ ಆಗುವುದು ಸಹಜ. ಕೊಹ್ಲಿ ಮರಳಿ ಫಾರ್ಮ್‌ಗೆ ಬರಲಿದ್ದಾರೆ’ ಎನ್ನುವುದು ಮಾಜಿ ನಾಯಕ ದ್ರಾವಿಡ್ ಖಚಿತ ನುಡಿ.

ಅದೇನೇ ಇದ್ದರೂ ಕೊಹ್ಲಿ ರ್‍ಯಾಂಕಿಂಗ್ ಇಳಿದಿಲ್ಲ. ಒಂದು ದಿನದ ಪಂದ್ಯದ ಐಸಿಸಿ ರ್‍ಯಾಂಕಿಂಗ್‌ನಲ್ಲಿ ಕೊಹ್ಲಿ ಈಗಲೂ ಹಾಶಿಂ ಆಮ್ಲ ಜತೆಗೆ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಆದರೆ ಮುಂದಿನ ಟೆಸ್ಟ್‌ನಲ್ಲೂ ಇಳಿಕೆ ಹೀಗೆಯೇ ಮುಂದುವರಿದರೆ ಕಷ್ಟ– ಭಾರತ ತಂಡಕ್ಕೂ, ಅನುಷ್ಕಾ ಶರ್ಮಾಗೂ!

## ಬ್ಯುಸಿ ಲತಾ ದೀದಿ

84ರ ಇಳಿವಯಸ್ಸಿನಲ್ಲೂ ಲತಾ ದೀದಿಯ ಸಂಗೀತ ಕಾಯಕ ನಿಂತಿಲ್ಲ. ಹಾಡುಗಳ ರೆಕಾರ್ಡಿಂಗ್ ನಡೆದೇ ಇದೆ. ಆದರೆ ಈಗ ಅವರ ಒಲವು ಆಧ್ಯಾತ್ಮದತ್ತ. ಬಾಲಿವುಡ್ ಬೆಳ್ಳಿತೆರೆಯ ಸಾರ್ವಕಾಲಿಕ ಶ್ರೇಷ್ಠ ಪ್ರೇಮಗೀತೆಗಳನ್ನೆಲ್ಲ ನಿಸೂರಾಗಿ ಹಾಡಿ ಮುಗಿಸಿರುವ ಲತಾ ದೀದಿ, ಇತ್ತೀಚೆಗೆ ಹೆಚ್ಚು ಭಕ್ತಿ ಸಂಗೀತದತ್ತ ವಾಲಿದ್ದಾರೆ. ಇವತ್ತಿಗೂ ದೇಶಭಕ್ತಿ ಗೀತೆಗಳ ಸ್ವರಸಾಮ್ರಾಜ್ಞಿ ಎನ್ನಿಸಿ ಕೊಂಡಿರುವ ಲತಾ ದೀದಿಯ ಹೊಸ ಸೂಫಿ ಸಂಗೀತದ ಹಾಡುಗಳೂ ಎಲ್ಲೆಡೆ ಜನಪ್ರಿಯವಾಗಿವೆ. ‘ಯಾ ರಬ್ಬಾ’ ಎನ್ನುವ ಅವರ ಇತ್ತೀಚಿನ ಸೂಫಿ ಹಾಡುಗಳ ಸಿ.ಡಿ ಅತ್ಯಧಿಕ ಮಾರಾಟ ಕಂಡಿದೆ. ಹಾಗೆ ನೋಡಿದರೆ ಇದೇ ಮೊದಲ ಬಾರಿಗೆ ಅವರು ಸೂಫಿ ಗೀತೆಗಳನ್ನು ಹಾಡಿದ್ದು. ಅದೂ ಸೋದರಳಿಯ ಬೈಜನಾಥ್ ಹಾಡುಗಳಿರುವ ಆಲ್ಬಂ ಸಲುವಾಗಿ. ‘ಆತ ತುಂಬಾ ಕಡಿಮೆ ಮಾತನಾಡುವವ. ಒಳ್ಳೆಯ ಗಾಯಕ. ಆತನನ್ನು ನಾನು ಪ್ರಮೋಟ್ ಮಾಡುವಂಥದ್ದೇನೂ ಇಲ್ಲ. ಆತನ ಜತೆಗೆ ಹಾಡಿದ್ದು ಒಂದು ಹೊಸ ಅನುಭವ’ ಎಂದಿದ್ದಾರೆ ಲತಾ ದೀದಿ.



ಭಾರತದ ಬಹುತೇಕ ಎಲ್ಲ ಭಾಷೆಗಳಲ್ಲೂ ಹಾಡಿರುವ ಲತಾ ದೀದಿ, ಇಂಗ್ಲಿಷ್‌ನಲ್ಲೂ ಕಂಠ ನೀಡಿದ್ದಾರೆ. ಮನ್ನಾಡೇ, ಕಿಶೋರ್‌ಕುಮಾರ್, ಕುಮಾರ್ ಸಾನು, ಅದ್ನಾನ್ ಸಾಮಿ ಮುಂತಾಗಿ ಬಾಲಿವುಡ್ ಎಲ್ಲ ಹಿರಿಕಿರಿಯ ಗಾಯಕರ ಜತೆಗೂ ಮೈಕ್ ಹಂಚಿಕೊಂಡಿದ್ದಾರೆ. ಅವರ ‘ಯಾ ರಬ್ಬಾ’ ಸೂಫಿ ಗೀತೆಗಳ ಆಲ್ಬಂ ಬಂದಿರುವುದು ಎಲ್‌ಎಮ್ ಎಂಬ ಹೊಸ ಸ್ವತ ಕಂಪೆನಿಯ ಹೆಸರಲ್ಲಿ. ಅಂಧೇರಿಯಲ್ಲಿ ಅವರದ್ದೇ ಆದ ರೆಕಾರ್ಡಿಂಗ್ ಸ್ಟುಡಿಯೋದಲ್ಲಿ ಕೆಲಸ ನಡೆಯಿತು. ‘ಇನ್ನು ಮುಂದೆ ಎಲ್‌ಎಮ್ ಅಂಕಿತದಲ್ಲಿ ಭಕ್ತಿಗೀತೆಗಳನ್ನು ಮಾತ್ರ ಹಾಡುತ್ತೇನೆ’ ಎಂದಿದ್ದಾರೆ ದೀದಿ.

ಈ ಇಳಿವಯಸ್ಸಿನಲ್ಲೂ ದೀದಿಯ ಕೆಲಸದ ಶ್ರದ್ಧೆ ಮಾತ್ರ ಕುಂದಿಲ್ಲ. ಇತ್ತೀಚೆಗೆ ಜೈನ ಧರ್ಮದ ಭಜನ್ ಮತ್ತು ಮಂತ್ರಗಳನ್ನು ಹಾಡುವಾಗ, ಆ ಮಂತ್ರಗಳನ್ನು ತಪ್ಪಿಲ್ಲದಂತೆ ಹಾಡಲೆಂದೇ ಶಿಕ್ಷಕಿಯೊಬ್ಬರನ್ನು ಪಾಠಕ್ಕಾಗಿ ನೇಮಿಸಿಕೊಂಡಿದ್ದರು. ಈ ಹಿಂದೆ ಭಗವದ್ಗೀತೆಯ ಆಲ್ಬಂಗೆ ಹಾಡುವಾಗಲೂ ಸಂಸ್ಕೃತ ಶಿಕ್ಷಕಿಯೊಬ್ಬರಿಂದ ಪಾಠ ಹೇಳಿಸಿ ಕೊಂಡಿದ್ದರು. ಹೊಸ ಪೀಳಿಗೆಯ ಗಾಯಕಿಯರು ಲತಾ ದೀದಿಯಿಂದ ಕಲಿಯಬೇಕಾದದ್ದು ಬಹಳಷ್ಟಿದೆ!

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65